ನೇಮಕಾತಿ ಪ್ರಕ್ರಿಯೆ ಆಗುವವರೆಗೆ ಇದರಿಂದ ಬಹಳ ಅನುಕೂಲವಾಗಿದೆ. ಇದು ಈ ಸದನದ ಎಲ್ಲ ಸದಸ್ಯರಿಗೆ ಗೊತ್ತಿದೆ. ಹೈಸ್ಕೂಲುಗಳನ್ನು ನಾವು ಪ್ರಾರಂಭ ಮಾಡಿದ್ದೇವೆ. ಈ ವರ್ಷದ ಶೈಕ್ಷಣಿಕ ವರ್ಷ ಇನ್ನೇನು ಮುಗಿದು ಹೋಯಿತು. ಇನ್ನೇನು ಮುಂದಿನ ತಿಂಗಳು ಪರೀಕ್ಷೆ ಶುರುವಾಗಿಬಿಡುತ್ತದೆ. ಹಾಗಾಗಿ, ಅದರ ನೇಮಕಾತಿ ಪ್ರಕ್ರಿಯೆಯಲ್ಲಿ ವಿಳಂಬವಾಗಿರಬಹುದು. ಆದರೆ, ಮುಂದಿನ ವರ್ಷದೊಳಗೆ ಹುದ್ದೆ ಖಾಲಿ ಇಲ್ಲದಿರುವಂತೆ ನೋಡಿಕೊಳ್ಳುತ್ತೇವೆ. ಒಮ್ಮೆ ಆಕಸ್ಮಿಕವಾಗಿ ಯಾವುದಾದರೂ ಕಾರಣದಿಂದ ಖಾಲಿ ಉಳಿದರೆ, ನಾವು ಈ ಅತಿಥಿ ಉಪನ್ಯಾಸಕರನ್ನು ಮುಂದಿನ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಅವರು ಈ ರೀತಿಯ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ. ಕೊನೆಗೆ ನನ್ನ ಒಂದು ವಿನಂತಿ ಏನೆಂದರೆ, ಇವತ್ತು ಸಂಜೆ banquet hall ನಲ್ಲಿ 'ಶಾಲೆಗಾಗಿ ನಾವು ನೀವು' ಎನ್ನುವ ಕಾರ್ಯಕ್ರಮ ನಡೆಯಲಿದ್ದು, ನಮ್ಮ ಶಾಲೆಗಳನ್ನು ದತ್ತು ತೆಗೆದುಕೊಳ್ಳುವಂಥ, ಪಾಲನೆ, ಪೋಷಣೆ ಮಾಡುವಂಥ ಕಾರ್ಯಕ್ರಮವಿದೆ. ಮಾನ್ಯ ಅಧ್ಯಕ್ಷರೂ ಸೇರಿದಂತೆ ಈ ಸದನದ ಎಲ್ಲ ಗೌರವಾನ್ವಿತ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಶಾಲೆಗಳನ್ನು ಇನ್ನಷ್ಟು ಹೆಚ್ಚು ಗುಣಾತ್ಮಕವಾಗಿ ಅಭಿವೃದ್ಧಿಪಡಿಸುವುದಕ್ಕೆ ಬೇಕಾಗಿರುವ ಚಿಂತನೆ ಸರ್ಕಾರದಿಂದ ಆಗಿದೆ. ತಾವೆಲ್ಲರೂ ಅದರಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ವಿನಂತಿ ಮಾಡುತ್ತೇನೆ.

ವಿದ್ಯುತ್ ಸ್ಥಾವರ ಸ್ಥಾಪನೆ ಬಗ್ಗೆ

35 : (74) ಶ್ರೀ ಮಂಜು ಎ. (ಅರಕಲಗೂಡು)

ಶ್ರೀ ಕೆ.ಎಸ್.ಈಶ್ವರಪ್ಪ (ಮಾನ್ಯ ಇಂಧನ ಸಚಿವರು)

ಅ) ಹಾಸನ ಜಿಲ್ಲೆ. ಅರಕಲಗೂಡು ತಾಲ್ಲೂಕಿನ ರುದ್ರ ಪಟ್ಟಣದಲ್ಲಿ ವಿದ್ಯುತ್ ಸ್ಥಾವರ ಸ್ಥಾಪನೆಗೆ ಸರ್ಕಾರದ ಅನುಮತಿ ನೀಡಿದೆಯೇ;

ಕೆ.ಪಿ.ಟಿ.ಸಿ.ಎಸ್.ನ ತಾಂತ್ರಿಕ ಸಲಹಾ ಸಮಿತಿ ಅನುಮೋದನೆ ದಿನಾಂಕ:11.6.2007 ರಂದು ನೀಡಿದೆ.

ಆ) ಹಾಗಿದ್ದಲ್ಲಿ, ಎಂದಿನಿಂದ ಕಾಮಗಾರಿ ಪ್ರಾರಂಭಿಸಲಾಗುವುದು ಹಾಗೂ ಯಾವಾಗ ಪೂರ್ತಿಗೊಳಿಸುವುದು;

ಈ ಕಾಮಗಾರಿಯನ್ನು ಮುಂಬರುವ ವರ್ಷವಾದ 2009–10ರ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಉದ್ದೇಶಿಸಿದೆ.

ಇ) ಈ ವಿದ್ಯುತ್ ಸ್ಥಾವರದ ಸ್ಥಾಪನೆಗೆ ಈ ಸಾಲಿನ ಬಜೆಟ್‌ನಲ್ಲಿ ಬಿಡುಗಡೆ ಮಾಡಲಾಗುವ ಅನುದಾನವೆಷ್ಟು?

ಉದ್ಭವಿಸುವುದಿಲ್ಲ.

ಶ್ರೀ ಎ.ಮಂಜು: ಮಾನ್ಯ ಸಚಿವರು ದಿ:11.06.2007ರಲ್ಲಿ ಅನುಮೋದನೆ ನೀಡಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, 2007–2008ರಲ್ಲಿ ಇವರು ಏಕೆ ಕೆಲಸ ಮಾಡಲಿಲ್ಲ? ಈಗ ಅವರು ಮತ್ತೊಮ್ಮೆ 2009–10ರ ಸಾಲಿನಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತೇವೆಂದು ಉತ್ತರ ಕೊಟ್ಟಿದ್ದಾರೆ. ಬಜೆಟ್‌ನಲ್ಲಿ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎಂದು ಕೇಳಿದರೆ, ಉದ್ಭವಿಸುವುದಿಲ್ಲವೆನ್ನುವ ಉತ್ತರ ಕೊಟ್ಟಿದ್ದಾರೆ. 2010ರಲ್ಲಿ ಈ ಕಾಮಗಾರಿಯನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ ಮೇಲೆ ಉದ್ಭವಿಸುವುದಿಲ್ಲವೆಂದು ಉತ್ತರ ಕೊಟ್ಟರೆ ಹೇಗೆ? ಈ ಬಗ್ಗೆ ಮಾನ್ಯ ಸಚಿವರು ಕ್ಲಾರಿಫೈ ಮಾಡಬೇಕಾಗುತ್ತದೆ. ನಮ್ಮಲ್ಲಿ ರುದ್ರಪಟ್ಟಣ ಎನ್ನುವ ಗ್ರಾಮವಿದೆ. ಆ ಗ್ರಾಮ ಇಡೀ ಪ್ರಪಂಚದಲ್ಲಿಯೇ ಸಂಗೀತಕ್ಕೆ ಹೆಸರುವಾಸಿಯಾಗಿದೆ. ಇದರಲ್ಲಿ ತಾವು ತಾರತಮ್ಯ ಮಾಡಬಾರದು. ಇದರಲ್ಲೇನಾಗಿದೆ ಎಂದರೆ, ಹಾಸನ ಎನ್ನುವುದು ನಿಮ್ಮ ಕಣ್ಣಿಗೆ ಬಿದ್ದಿದೆ. ಅದನ್ನು ಬಿಟ್ಟು ಈಚೆಗೆ ಬನ್ನಿ. ನಾವೆಲ್ಲ ನಂಜುಂಡಪ್ಪ ವರದಿಯನ್ನು ಜಾರಿಗೆ ತರಬೇಕೆಂದು ಹೇಳುತ್ತಲೇ ಇದ್ದೇವೆ. ನಂಜುಂಡಪ್ಪನವರ ವರದಿಯನ್ನು ಹೀಗೆ ಮಾಡಿದ್ದಾರೆ ಎಂದರೆ ಪಾಪ ನಂಜುಂಡಪ್ಪನವರಿಗೆ ತೊಂದರೆಯಾಗಿ ಬಿಡುತ್ತದೆಯೋ ಏನೋ? ಅವರ ಹೆಸರು ಹೇಳಿ ಈ ರೀತಿ ಮಾಡುವುದು ಬೇಡ. ಹಾಸನ ಎನ್ನುವುದರ ಬಗ್ಗೆ ನಿಮ್ಮ ಮನಸ್ಸಿನಲ್ಲಿರುವುದನ್ನು ತೆಗೆದು ಹಾಕಿ ನೀವೇನು 2009–10ರಲ್ಲಿ ಕಾಮಗಾರಿಯನ್ನು ಮಾಡುವುದಕ್ಕೆ ಒಪ್ಪಿಗೆ ಕೊಟ್ಟಿದ್ದೀರಿ, ಅದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎನ್ನುವುದನ್ನು ದಯವಿಟ್ಟು ಮಾನ್ಯ ಸಚಿವರು ಹೇಳಬೇಕು.

ಶ್ರೀ ಕೆ.ಎಸ್.ಈಶ್ವರಪ್ಪ: ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ರುದ್ರಪಟ್ಟಣ ಗ್ರಾಮ ಆರ್.ಕೆ. ಶ್ರೀಕಂಠನ್, ಸಂಗೀತಗಾರರ ವಿಶೇಷವಾದ ಒಂದು ಊರಾಗಿದೆ. ನಿಜ, ದಿ:11.06.2007ರಲ್ಲಿ ವಿದ್ಯುತ್ ಸ್ಥಾವರ ಸ್ಥಾಪನೆ ಮಾಡಲು ತಾಂತ್ರಿಕ ಸಲಹಾ ಸಮಿತಿಯಿಂದ ಅನುಮೋದನೆ ದೊರಕಿತ್ತು. ಆದರೆ, ಬಜೆಟ್ ಇಟ್ಟಿರಲಿಲ್ಲ. ಈಗ ನಾವು ಬಜೆಟ್ ಇಡುತ್ತಿದ್ದೇವೆ. 18 ತಿಂಗಳುಗಳಲ್ಲಿ ನಾವು ಈ ಕಾಮಗಾರಿಯನ್ನು ಮುಗಿಸಿಕೊಡುತ್ತೇವೆ.

ಕಾಪು ಕ್ಷೇತ್ರ ವ್ಯಾಪ್ತಿಯಲ್ಲಿ ತರಬೇತಿ ಕೇಂದ್ರ ತೆರೆಯುವ ಬಗ್ಗೆ.

36 (314) ಶ್ರೀ ಲಾಲಾಜಿ ಆರ್. ಮೆಂಡನ್ [ಕಾಪು]

ಶ್ರೀ ಅರವಿಂದ ಲಿಂಬಾವಳಿ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಅ) ಕಾಪು ಕ್ಷೇತ್ರ ವ್ಯಾಪ್ತಿಯಲ್ಲಿ ಸರ್ಕಾರ ಹಾಗೂ ಖಾಸಗಿ ಡಿಪ್ಲೋಮಾ[ತಾಂತ್ರಿಕ] ತರಬೇತಿ ಕೇಂದ್ರ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.